ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು):–

ಅ) ಬಂದಿದೆ.

ಆ) ಮೈಗೂರು ಪುನರ್ವಸತಿ ಕೇಂದ್ರವು ಕಪ್ಪು ಮಣ್ಣಿನಿಂದ ಕೂಡಿದ್ದು, ಈ ಪುನರ್ವಸತಿ ಕೇಂದ್ರದ ಪಕ್ಕದಲ್ಲಿ ಒಂದು ಹಳ್ಳ ಹರಿಯುತ್ತದೆ. ಅಲ್ಲದೆ, ಘಟಪ್ರಭಾ ಎಡದಂಡೆ ಕಾಲುವೆ ವಿತರಣಾ ಕಾಲುವೆ ಪುನರ್ವಸತಿ ಕೇಂದ್ರದ ಮಧ್ಯದಲ್ಲಿ ಹಾದು ಹೋಗಿದೆ. ಈ ಹಳ್ಳ ಹಾಗೂ ವಿತರಣಾ ಕಾಲುವೆ ಅಕ್ಕಪಕ್ಕದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ವಾಸಿಸುತ್ತಿದ್ದು, ಇದರಿಂದ ಸ್ವಲ್ಪ ಮಟ್ಟಿನ ಜವಳು ಹಾಗೂ ನೆಲದಲ್ಲಿ ತೇವಾಂಶವಿರುವುದು ಕಂಡುಬರುತ್ತದೆ, ಈಗಾಗಲೇ ಈ ಪುನರ್ವಸತಿ ಕೇಂದ್ರದಲ್ಲಿ ಅಗತ್ಯವಾದ ಎಲ್ಲಾ ನಾಗರೀಕ ಸೌಲಭ್ಯಗಳನ್ನು ಒದಗಿಸಲಾಗಿದೆ.

ಇ) ಈ ಸಮಸ್ಯೆ ಪರಿಹಾರಕ್ಕಾಗಿ ಈಗಾಗಲೇ 2010–11ನೇ ಸಾಲಿನ ಎಸ್.ಸಿ.ಪಿ/ ಟಿ.ಎಸ್.ಪಿ ಯೋಜನೆಯಡಿ ಕ್ರಿಯಾ ಯೋಜನೆಯನ್ನು ರೂಪಿಸಲಾಗಿದೆ. ಈ ಕ್ರಿಯಾ ಯೋಜನೆಗೆ ಕೃಷ್ಣಾ ಭಾಗ್ಯ ಜಲ ನಿಗಮದಲ್ಲಿ ಅನುಮೋದನೆ ನೀಡಿ ಕಾಮಗಾರಿಯನ್ನು ಕೂಡಲೇ ಕೈಗೆತ್ತಿಕೊಳ್ಳಲಾಗುವುದು.

ಅಂಗವಿಕಲ ನೌಕರರನ್ನು ಕಂದಾಯ ಇಲಾಖೆಯಲ್ಲಿ "ಸಿ/ಡಿ" ಗುಂಪಿನಲ್ಲಿ ವಿಲೀನ ಗೊಳಿಸುವುದು

260 (438) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾ) – ಮಾನ್ಯ ಕಂದಾಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಧಾರವಾಡ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಅಂಧನಾಗಿರುವ ಅಂಗವಿಕಲ ನೌಕರರನ್ನು (ಟೆಲಿಫೋನ್ ಆಪರೇಟರ್) 24 ವರ್ಷ ಸೇವೆ ಸಲ್ಲಿಸಿದ್ದು, ಕೆ.ಎ.ಟಿ. ಯಿಂದ ಖಾಯಂಗೊಳಿಸುವಂತೆ ನಿರ್ದೇಶನ ಹೊರಡಿಸಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸರ್ಕಾರಿ ನೌಕರರ ನೇಮಕಾತಿ ನಿಯಮಗಳ ಪ್ರಕಾರ ಶೇ.5 ಅಂಗವಿಕಲರಿಗೆ ಕಾಯ್ದಿರಿಸಬೇಕಾಗಿದ್ದು, ಕಳೆದ 25 ವರ್ಷಗಳಲ್ಲಿ ನೇಮಕಾತಿ ಪ್ರಾಧಿಕಾರಿಯಾಗಿ ಜಿಲ್ಲಾಧಿಕಾರಿ ಧಾರವಾಡ ಇವರು ನೇಮಕಾತಿ ಮಾಡಿದ ಸಿ ಮತ್ತು ಡಿ ಗ್ರೂಪ್ ಹುದ್ದೆಗಳೆಷ್ಟು?

ಇ) ಈ ಪೈಕಿ ಅಂಗವಿಕಲರಿಗೆ ಕಾಯ್ದಿರಿಸಿದ ಹುದ್ದೆಗಳಲ್ಲಿ ಎಷ್ಟು ಜನರನ್ನು ನೇಮಕಾತಿ ಮಾಡಲಾಗಿದೆ

ಈ) ಈ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಸರ್ಕಾರದ ಮಟ್ಟದಲ್ಲಿ ಪರಿಗಣಿಸಿ ಇತ್ಯರ್ಥ ಗೊಳಿಸಲಾಗುವುದೇ?

ಶ್ರೀ ಜೆ. ಕರುಣಾಕರ ರೆಡ್ಡಿ (ಕಂದಾಯ ಸಚಿವರು):–

ಅ) ಜಿಲ್ಲಾಧಿಕಾರಿಗಳ ಕಛೇರಿ, ಧಾರವಾಡ ಇಲ್ಲಿ ಪಿಬಿಎಕ್ಸ್ ಆಪರೇಟರ್ ಆಗಿ ಸೇವೆ ಸಲ್ಲಿಸುತ್ತಿರುವ ಅಂಧ ಅಂಗವಿಕಲ ನೌಕರನಾದ ಶ್ರೀ ಎನ್.ಸಿ. ಹಿರೇಮಠ ಇವರ ಸೇವೆಯನ್ನು ಸಕ್ರಮಗೊಳಿಸುವ ಕುರಿತು ಮರುಪರಿಶೀಲಿಸುವಂತೆ ಕೆ.ಎ.ಟಿ. ಅರ್ಜಿ ಸಂ. 1362/2007 ರ ಆದೇಶ ದಿ: 16/10/2009ರಲ್ಲಿನ ನಿರ್ದೇಶನವು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಧಾರವಾಡ ಜಿಲ್ಲೆಯಲ್ಲಿ 1988 ರಿಂದ ಇಲ್ಲಿಯವರೆಗೆ ಈ ಕೆಳಗಿನಂತೆ ಗ್ರೂಪ್ ಸಿ ಮತ್ತು ಡಿ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲಾಗಿದೆ.

ಗ್ರೂಪ್ ಸಿ – 356, ಗ್ರೂಪ್ ಡಿ – 53

ಇ) ಗ್ರೂಪ್ ಸಿ – 4, ಗ್ರೂಪ್ ಡಿ – 2

ಈ) ಈ ಪ್ರಕರಣ, ಕರಿತಂತೆ ಆದಷ್ಟು ಬೇಗ ಸರ್ಕಾರದ ಹಂತದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಏತ ನೀರಾವರಿ ಕಾಮಗಾರಿ

261 (538) ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) – ಮಾನ್ಯ ಜಲಸಂಪನ್ಮೂಲ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನ ದಬ್ಬೇಘಟ್ಟ, ಅಮ್ಮಸಂದ್ರ, ಅರೇಮಾರನಹಳ್ಳಿ, ಮುದ್ದನಹಳ್ಳಿ ಗ್ರಾಮಗಳಿಗೆ ಏತ ನೀರಾವರಿ ಕಾಮಗಾರಿಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು ಹಾಗೂ ಈ ಕಾಮಗಾರಿಗೆ ಮಾಡಿದ ಅಂದಾಜು ವೆಚ್ಚವೆಷ್ಟು;

ಆ) ಸದರಿ ಏತ ನೀರಾವರಿ ಕಾಮಗಾರಿಯನ್ನು ಎಂದು ಪೂರ್ಣಗೊಳಿಸಲಾಗುವುದು ಹಾಗೂ ಎಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಲಭಿಸುವುದು. (ಮಾಹಿತಿ ನೀಡುವುದು)?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):–

ಅ) ಹೇಮಾವತಿ ಯೋಜನೆಯ ನಾಗಮಂಗಲ ಶಾಖಾ ನಾಲೆಯ ಸರಪಳಿ 43150 ಮೀ ನಿಂದ 16.10 ಕ್ಯೂಸೆಕ್ಸ್ (29.11 ಎಂ.ಸಿ.ಎಫ್.ಟಿ) ನೀರನ್ನು ಎತ್ತಿ ತುರುವೇಕೆರೆ ತಾಲ್ಲೂಕಿನ ದಬ್ಬೇಘಟ್ಟ, ಅರೆಮಾರನಹಳ್ಳಿ ಮತ್ತು ಇತರೆ ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸುವ ಯೋಜನೆಯ ಅಂದಾಜನ್ನು ರೂ. 305.00 ಲಕ್ಷಗಳಿಗೆ ತಯಾರಿಸಲಾಗಿತ್ತು. ಈ ಪ್ರಸ್ತಾವನೆ ಬಗ್ಗೆ ದಿನಾಂಕ: 08/11/2006 ರಂದು ನಡೆದ ಕಾವೇರಿ ನೀರಾವರಿ ನಿಗಮದ ಮಂಡಳಿಯ 15ನೇ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿದ್ದು, ನಂತರ ಇವು